# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ

## ಸಿ. ಸಿ. ನಂಃ 193/2020

ಪಿ.ಡಬ್ಲ್ಯೂ- 6
ಸಿ.ಡಬ್ಲ್ಯೂ- 13

ಹೆಸರು ಃ- ಅರುಣ ಅಂಗಡಿ

ತಂದೆ / ಗಂಡನ ಹೆಸರು ಃ- ಶರಣಪ್ಪ

ವಯಾ ಃ- 58 ವರ್ಷ

ಉದ್ಯೋಗ ಃ- ಸಾರಿಗೆ ನಿಯಂತ್ರಕರು

ವಾಸಸ್ಥಳ ಃ- ಗದಗ ಕೆಎಸಆರಟಿಸಿ ಘಟಕ

ಸತ್ಯ ಪ್ರತಿಜ್ಞೆ ಮೇರೆಗೆ ಃ- ದಿನಾಂಕಃ 27-01-2026

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

ನಾನು 1999 ರಿಂದ 2021 ರವರೆಗೆ ಗದಗ ಘಟಕದಲ್ಲಿ ಕೆಎಸಆರಟಿಸಿ ಸಂಸ್ಥೆಯಲ್ಲಿ ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸಿದ್ದು, ನಂತರದಲ್ಲಿ 2021 ರಿಂದ ಇಲ್ಲಿಯವರೆಗೆ ನಿಯಂತ್ರಕರಾಗಿ ಕಾರ್ಯ ನಿರ್ವಹಿಸುತ್ತಾ ಬಂದಿರುತ್ತೇನೆ.

1) ದಿನಾಂಕ 14-01-2020 ರಂದು ನಾನು ಹಾಗೂ ಶಿವಪ್ಪ ಬಡಿಗೇರ ಇತನು ಕೆಎಸಆರಟಿಸಿ ಬಸ್ಸ ಸಂಖ್ಯೆ ಕೆಎ 26 ಎಫ್ 977 ನೇದ್ದರನ್ನು ಹುಬ್ಬಳ್ಳಿಯಿಂದ ಸಂಜೆ 05-15 ಗಂಟೆಗೆ ಹುಬ್ಬಳ್ಳಿ ಗದಗ ಮಾರ್ಗವಾಗಿ ಹೊರಟಿದ್ದು ಸವಳಹಳ್ಳ ಸೇತುವೆ ಬಳಿ ಎದುರುನಿಂದ ದ್ವಿಚಕ್ರ ವಾಹನದ ಮೇಲೆ 3 ಜನರು ಬಂದು ನಮ್ಮ ಬಸ್ಸಿಗೆ ಗುದ್ದಿ ಅಪಘಾತ ಪಡಿಸಿರುತ್ತಾರೆ. ಸ್ಥಳದಲ್ಲಿ ಒಬ್ಬನು ಮರಣ ಹೊಂದಿದ್ದು ಅವರನ್ನು ನಾವು ಹುಬ್ಬಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ನಾವು ಪ್ರಯಾಣಿಕರಿಗೆ ಪರಿಯಾಯ ವ್ಯವಸ್ಥೆ ಮಾಡಿ ನಾನು ಹಾಗೂ ಆರೋಪಿತನು ಠಾಣೆಗೆ ಹೋಗಿರುತ್ತೇವೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -

1) ದಿನಾಂಕ 14-01-2020 ರಂದು ನಾನು ಹಾಗೂ ಆರೋಪಿತನು ನಮ್ಮ ಕೆಎಸಆರಟಿಸಿ ಬಸ್ಸ ಸಂಖ್ಯೆ ಕೆಎ 26 ಎಫ್ 877 ನೇದ್ದರನ್ನು ಹುಬ್ಬಳ್ಳಿಯಿಂದ ಗದಗ ಮಾರ್ಗವಾಗಿ ಹೊರಟಿದ್ದು ನಮ್ಮ ವಾಹನವು ಸವಳಹಳ್ಳ ಸೇತುವ ಬಳಿ ಬಂದಾಗ ಅಲ್ಲಿ ಆರೋಪಿತನು ಅತೀ ವೇಗದಿಂದ ಒವರಟೇಕ ಮಾಡಲು ಹೋಗಿ ಬಲಬದಿಗೆ ಹೋಗಿ ಎದುರುಗಡೆಯಿಂದ ಶಿವಕುಮಾರ ಕಾಳೆ ರವರು ದ್ವಿಚಕ್ರ ವಾಹನ ಸಂಖ್ಯೆ ಕೆಎ 61 ಹೆಚ್ 8798 ಚಲಾಯಿಸುತ್ತಿದ್ದು ಅದರಲ್ಲಿ ಅಶೋಕ ಹಾಗೂ ದುರ್ಗಪ್ಪ ಇವರು ಹಿಂಬದಿ ಸವಾರರಾಗಿದ್ದು, ಆರೋಪಿತನು ಸದರಿಯವರಿಗೆ ಗುದ್ದಿದ್ದರಿಂದ ಅಪಘಾತದಲ್ಲಿ ಅಶೋಕ ರವರಿಗೆ ಬಾರಿ ಪ್ರಮಾಣದ ಗಾಯವಾಗಿದ್ದು, ದುರ್ಗಪ್ಪ ಶಿವಪ್ಪ ಅಬ್ಬಿಗೇರಿ ಹಾಗೂ ಶಿವಕುಮಾರ ಕಾಳೆ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಆರೋಪಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಅಂದರೆ ಸರಿಯಲ್ಲ.

2) ಸದರಿ ಘಟನೆಯ ಬಗ್ಗೆ ನಾನು ದಿನಾಂಕ 15-01-2020 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.**15** ಎಂದು ಗುರುತಿಸಲಾಯಿತು. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದ್ದರು ಸಹ, ನಾನು ಕಣ್ಣಾರೇ ಅಪಘಾತವನ್ನು ನೋಡಿದರು ಸಹ ಇಲ್ಲಾ ಹಾಗೂ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

*ಪಾಟೀಸವಾಲು ಆರೋಪಿ ಪರ ಃ ಶ್ರೀ ಎಂ ಎಸ್ ಹೆಚ್ ವಕೀಲರಿಂದ ಃ -*

ಪಾಟೀಸವಾಲು ಇಲ್ಲಾ ಎಂದು ನಿವೇದಿಸಿಕೊಂಡ ಕಾರಣ ಪಾಟೀಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**
**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**